# ಮೈಸೂರಿನ ಮನಸೂರೆಗೊಂಡ ಬಿಗ್‌ಬಾಸ್ ಸಂತೆ



ಈ ಬಾರಿಯ ಬಿಗ್‌ಬಾಸ್ ಮುಗಿದಿದೆ. ಆದರೆ ಅದರ ಬಗೆಗಿನ ಕುತೂಹಲ ಇನ್ನೂ ಮುಗಿದಿಲ್ಲ.

ಇದಕ್ಕೆ ಸಾಕ್ಷಿಯಾದದ್ದು ಈಚೆಗೆ ಅರಮನೆ ನಗರ ಮೈಸೂರಿನಲ್ಲಿ ನಡೆದ ಬಿಗ್‌ಬಾಸ್ ಸಂತೆ ಕಾರ್ಯಕ್ರಮ. ಕನ್ನಡ ಟೆಲಿವಿಷನ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಕಲರ್ಸ್ ಕನ್ನಡ ವಾಹಿನಿ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ ಮೈಸೂರಿನ ಜನರು ಕಿಕ್ಕಿರಿದು ಸೇರಿದ್ದರು ಮಾತ್ರವಲ್ಲದೆ ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಮ್ಮ ಮೆಚ್ಚಿನ ಸ್ಪರ್ಧಿಗಳನ್ನು ಹತ್ತಿರದಿಂದ ನೋಡಿದರು, ಕಣ್ತುಂಬಿಕೊಂಡರು.

ಬಿಗ್‌ಬಾಸ್ ಅಂದರೆ ಸಂತೆಯಿಂದ ಸ್ವಲ್ಪ ದೂರವಿರುವ ರಿಯಾಲಿಟಿ ಶೋ. ದೈನಂದಿನ ಬದುಕಿನ ಜಂಜಾಟಗಳಿಂದ ದೂರ ಹೋಗಿ ತಮ್ಮನ್ನು ತಾವೇ ಕಂಡುಕೊಳ್ಳುವ ಕಾರ್ಯಕ್ರಮ. ಅಲ್ಲಿ ಮೊಬೈಲ್ ಫೋನ್ ಇಲ್ಲ, ಇ-ಮೇಲ್ ಇಲ್ಲ, ಬೆಳಿಗ್ಗೆ ಎದ್ದು ಕಚೇರಿಗೆ ಹೋಗುವುದಿಲ್ಲ, ಮನೆಮಂದಿಯೂ ಜೊತೆಗಿಲ್ಲ. ಹೊರಜಗತ್ತಿನ ಸಂಪರ್ಕ ಕಡಿದುಕೊಂಡು ಒಂದು ಮನೆಯೊಳಗೆ ನೂರಕ್ಕೂ ಹೆಚ್ಚು ದಿನ ಇದ್ದ ಆಟಗಾರರನ್ನು ಕಲರ್ಸ್ ಕನ್ನಡ ಮತ್ತೆ ಅಕ್ಷರಶಃ ಸಂತೆಗೆ ಕರೆದು-ಕೊಂಡು ಬಂದಿದ್ದು ಯಾಕೆ? ಅದೂ "ಬಿಗ್‌ಬಾಸ್ ಸಂತೆ" ಎಂಬ ಕಾರ್ಯಕ್ರಮದ ಮೂಲಕ ಮೈಸೂರಿಗೇ ಕರೆಸಿದ್ದು ಯಾಕೆ?

ಈ ಪ್ರಶ್ನೆಗಳಿಗೆ ಬಿಗ್‌ಬಾಸ್ ನಿರ್ದೇಶಕ ಹಾಗೂ ಕಲರ್ಸ್ ಕನ್ನಡ ಮತ್ತು ಕಲರ್ಸ್ ಸೂಪರ್ ಚಾನೆಲ್‌ಗಳ ಬ್ಯುಸಿನೆಸ್ ಹೆಡ್ ಪರಮೇಶ್ವರ ಗುಂಡ್ಕಲ್ ಹೀಗೆ ಹೇಳುತ್ತಾರೆ. "ಬಿಗ್‌ಬಾಸ್ ಎಂದರೆ ಸಂತೆಯಿಂದ ದೂರವಿರುವ ಕಾರ್ಯಕ್ರಮ ನಿಜ. ಆದರೆ ಈ ಕಾರ್ಯಕ್ರಮವನ್ನು ನೋಡಿರುವವರು ಜನಸಾಮಾನ್ಯರು. ಅವರಿಂದಾಗಿಯೇ ಇಂದು ಬಿಗ್‌ಬಾಸ್ ಈ ಮಟ್ಟಕ್ಕೆ ಬೆಳೆದಿರುವುದು. ಈ ಬಾರಿ 114 ದಿನ ಈ ಶೋ ನಡೆದರೂ ಕಣ್ಣೆವೆ ಸರಿಸದೆ ಅವರು ಈ ಕಾರ್ಯಕ್ರಮವನ್ನು ನೋಡಿದ್ದಾರೆ, ಮೆಚ್ಚಿಕೊಂಡಿದ್ದಾರೆ, ಯಶಸ್ಸುಗೊಳಿಸಿದ್ದಾರೆ. ಹಾಗಿರುವಾಗ ಅವರ ಬಳಿಗೆ ಈ ಸ್ಪರ್ಧಿಗಳನ್ನು ಕರೆದೊಯ್ಯುವುದು ನಮ್ಮ ಮೇಲಿರುವ ಜವಾಬ್ದಾರಿ. ಈ ಬಾರಿಯ ಬಿಗ್‌ಬಾಸ್ ವಿಜೇತ ಪ್ರಥಮ್ ಅವರು ಮೈಸೂರಿನವರೇ ಆಗಿರುವುದು ಮೈಸೂರಿನಲ್ಲಿಯೇ ಈ ಕಾರ್ಯಕ್ರಮ ನಡೆಸಲು ನಮಗೆ ಪ್ರೇರಣೆಯಾಯಿತು ನಿಜ. ಹಾಗೆಂದು ನಾವು ವಿಜೇತರ ಊರಿಗೆ ಮಾತ್ರ ಹೋಗುವುದಲ್ಲ. ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ರಾಜ್ಯದ ಉದ್ದಗಲಕ್ಕೂ ಪ್ರಯಾಣ ಮಾಡಬೇಕು ಮತ್ತು ನಮ್ಮ ಸ್ಟಾರ್‌ಗಳನ್ನು ಅಲ್ಲಿನ ಜನರಿಗೆ ಪರಿಚಯಿಸಬೇಕು, ಜನರ ನಾಡಿಮಿಡಿತ ಅರಿಯಬೇಕು ಎಂದುಕೊಂಡಿದ್ದೇವೆ."

ಮೈಸೂರಿನಲ್ಲಿ ನಡೆದ ಬಿಗ್‌ಬಾಸ್ ಸಂತೆಯಲ್ಲಿ ಪ್ರಥಮ್, ರೇಖಾ, ಓಂ ಪ್ರಕಾಶ್ ರಾವ್, ನಿರಂಜನ್ ದೇಶಪಾಂಡೆ, ಶೀತಲ್ ಶೆಟ್ಟಿ, ಮೋಹನ್, ಕಾರುಣ್ಯಾ ರಾಮ್, ಭುವನ್, ಸಂಜನಾ, ದೊಡ್ಡ ಗಣೇಶ್, ವಾಣಿಶ್ರೀ, ಚೈತ್ರಾ, ಶಾಲಿನಿ, ಮಸ್ತಾನ್ ಮತ್ತಿತರರು ಭಾಗವಹಿಸಿದ್ದರು. ಇಷ್ಟೇ ಅಲ್ಲದೆ ಬಹಳ ದಿನಗಳ ನಂತರ ಅಕುಲ್ ಬಾಲಾಜಿ ಕಲರ್ಸ್ ಕನ್ನಡಕ್ಕೆ ಮರಳಿ ಬಂದಿದ್ದಾರೆ. ಈ ಕಾರ್ಯಕ್ರಮವನ್ನು ಅಕುಲ್ ಬಾಲಾಜಿ ತಮ್ಮ ಎಂದಿನ ಲವಲವಿಕೆಯಲ್ಲಿ ನಿರೂಪಿಸಿದರು.

ಅದ್ಭುತ ಪರ್‌ಫಾರ್ಮೆನ್ಸ್, ಹಾಡು, ಕುಣಿತ, ಮೋಜು, ಮಸ್ತಿಯಿಂದ ಕೂಡಿದ "ಬಿಗ್‌ಬಾಸ್ ಸಂತೆ"ಯಲ್ಲಿ ಮೈಸೂರಿನ ಜನರು ಹುಚ್ಚೆದ್ದು ಕುಣಿದರು. ತಡರಾತ್ರಿವರೆಗೆ ಕಾರ್ಯಕ್ರಮ ನಡೆದರೂ ಒಬ್ಬರೂ ಕದಲಲಿಲ್ಲ. ಕೊನೆತನಕ ಕುಂತು, ನಿಂತು ಕಾರ್ಯಕ್ರಮ ವೀಕ್ಷಿಸಿದರು. ಅದರಲ್ಲೂ ವಿಶೇಷವಾಗಿ ಪ್ರಥಮ್ ವೇದಿಕೆಗೆ ಬಂದಾಗ ಜನರ ಕರತಾಡನ ಮುಗಿಲು ಮುಟ್ಟಿತ್ತು. ಜನರ ಅಪೇಕ್ಷೆಯಂತೆ ಪ್ರಥಮ್ ಅವರಿಗೆ "ಲಾರ್ಡ್ ಪ್ರಥಮ್ ಸರ್" ಪೋಷಾಕು ಧರಿಸಲಾಯಿತು. ಮತ್ತು ಜನರು ಅವರಿಗೆ ಪ್ರಶ್ನೆ ಕೇಳುವ ಅವಕಾಶ ನೀಡಲಾಯಿತು.

ಆದರೆ ಪ್ರಶ್ನೆ ಕೇಳುವ ಮೊದಲು 'ಲಾರ್ಡ್ ಪ್ರಥಮ್ ಸರ್ ಅವರಿಗೆ ಜೈ. ನ್ಯಾಯ ಅಂದರೆ ಪ್ರಥಮ್, ಪ್ರಥಮ್ ಅಂದರೆ ನ್ಯಾಯ' ಎಂಬ ಘೋಷವಾಕ್ಯ ಹೇಳಿಯೇ ಪ್ರಶ್ನೆ ಕೇಳಬೇಕಾಯಿತು.

ಪ್ರತಿಯೊಬ್ಬ ಸ್ಪರ್ಧಿ ಜನರ ಪ್ರಶ್ನೆಗಳಿಗೆ ಉತ್ತರಿಸಿದರು. ಒಟ್ಟಿನಲ್ಲಿ ಮೈಸೂರಿನ ಜನರಿಗೆ ಬಿಗ್‌ಬಾಸ್ ಸ್ಪರ್ಧಿಗಳನ್ನು ಹತ್ತಿರದಿಂದ ಕಾಣುವ, ಅವರ ಹಾಡು, ಕುಣಿತಗಳನ್ನು ನೋಡುವ ಅವಕಾಶವಾದರೆ, ಸ್ಪರ್ಧಿಗಳಿಗೆ ತಮ್ಮ ಮೆಚ್ಚಿನ ಅಭಿಮಾನಿಗಳ ಜೊತೆಗೆ ಬೆರೆತ, ಅವರ ಜೊತೆಗೆ ಸಮಯ ಕಳೆದ ತೃಪ್ತಿ ಸಿಕ್ಕಿತು. ಈ ಕಾರ್ಯಕ್ರಮ ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಮಾರ್ಚ್ 5 ರಂದು ಪ್ರಸಾರವಾಗಲಿದೆ. ■

BIGG BOSS ಸಂತೆ

ಮಾರ್ಚ್ 5, ಸಂಜೆ 4

colors ಕನ್ನಡ

